# IN THE COURT OF THE ADDL. SENIOR CIVIL JUDGE & JMFC., GUBBI
# **OS – 228/2023**

Witness present and duly sworn on : 28.10.2025.

Cross Examination: by Counsel for Defendant :

ನಾನು 1965 ರಲ್ಲಿ ಜನಿಸಿರುತ್ತೇನೆ. ನನ್ನ ಜನನದ ಪೂರ್ವದ 25 ವರ್ಷಗಳ ಹಿಂದೆ ಸರ್ವೆ ನಂ.24 ಜಮೀನಿಗೆ ಸಂಭಂದಿಸಿರುವ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿಲ್ಲ. 1940 ರಲ್ಲಿ ದಾವಾ ಆಸ್ತಿಯು ಸರ್ಕಾರಿ ಸ್ವತ್ತು ಎಂದರೆ ಸರಿ. ಸದರಿ ಜಮೀನನ್ನು ಸರ್ಕಾರದವರು ಪರಿಶಿಷ್ಟ ಜಾತಿ ಮತ್ತು ಪರಶಿಷ್ಟ ಪಂಗಡಗಳಿಗೆ ಸೇರಿದ ಶ್ರೀನಿವಾಸ ರವರ ಕುಟುಂಬಕ್ಕೆ ಮಂಜೂರು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಶ್ರೀನಿವಾಸ ರವರ ಕುಟುಂಬದವರ ಜೊತೆಯಲ್ಲಿ 15 ಎಕರೆ 33 ಗುಂಟೆ ಜಮೀನನ್ನು ಪರಿಶಿಷ್ಟ ಜಾತಿ ಮತ್ತು ಪರಶಿಷ್ಟ ಪಂಗಡಗಳಿಗೆ ಸೇರಿದ ಇನ್ನುಳಿದ ಎರಡು ವ್ಯಕ್ತಿಗಳಿಗೆ ಮಂಜೂರು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಶ್ರೀನಿವಾಸ ರವರ ಕುಟುಂಬದವರು ವಾದಿ ಮತ್ತು ಅವರ ಕುಟುಂಬದವರಿಗೆ ದಾವಾ ಆಸ್ತಿಯ ಸ್ವಾಧೀನವನ್ನು ಬಿಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಇರುವ ತೆಂಗು, ಅಡಿಕೆ, ಹುಣಸೆ ಮತ್ತು ಇತರೆ ಮರಗಳನ್ನು ಶ್ರೀನಿವಾಸ ಮತ್ತು ಅವರ ಪೂರ್ವಜರು ಹಾಕಿರುತ್ತಾರೆಂದರೆ ಸರಿಯಲ್ಲ. ನಾನು ಚೀರನಹಳ್ಳಿಯಲ್ಲಿ ವಾಸ ಇಲ್ಲ ಮತ್ತು ಬೆಂಗಳೂರಿನಲ್ಲಿ 1 ನೇ ವಾದಿ ಗೋವಿಂದರಾಜು ರವರೊಂದಿಗೆ ವಾಸ ಇದ್ದೇನೆಂದರೆ ಸರಿಯಲ್ಲ. ನನ್ನ ಗುರುತಿನ ಚೀಟಿ, ಪಡಿತರ ಚೀಟಿ ದಾಖಲೆಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಸರ್ವೆ ನಂ.24 ರಲ್ಲಿ ಇರುವ ಫಸಲುಗಳನ್ನು ಶ್ರೀನಿವಾಸ ಮತ್ತು ಅವರ

ಕುಟುಂಬದವರು ಪಡೆಯುತ್ತಿದ್ದಾರೆಂದರೆ ಸರಿಯಲ್ಲ. ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**Re examination – Nil.**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi